ಕರ್ನಾಟಕ ಸರಕಾರ
ವಾರ್ತಾ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ: 19–1–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | "A BRUSH with Celebrities" ಪುಸ್ತಕ ಬಿಡುಗಡೆ ಕಾರ್ಯಕ್ರಮ<br><br>ಪುಸ್ತಕ ಬಿಡುಗಡೆ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ | 20-01-2015<br>ಮಂಗಳವಾರ<br>ಬೆಳಗ್ಗೆ<br>10.30 ಗಂಟೆಗೆ | ಕೃಷ್ಣಾ ಮುಖ್ಯಮಂತ್ರಿಗಳ ಗೃಹ ಕಚೇರಿ<br>ಬೆಂಗಳೂರು – 560 001 |
| 2 | ಪತ್ರಿಕಾಗೋಷ್ಠಿ:<br><br>ಶ್ರೀ ಯು.ಟಿ.ಖಾದರ್<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 20-01-2015<br>ಮಂಗಳವಾರ<br>ಅಪರಾಹ್ನ<br>12.00 ಗಂಟೆಗೆ | ಸಭಾಂಗಣ ಕೊಠಡಿ ಸಂಖ್ಯೆ–419, ನಾಲ್ಕನೇ ಮಹಡಿ<br>ವಿಕಾಸ ಸೌಧ<br>ಬೆಂಗಳೂರು |
| 3 | ಎ.ಪಿ.ಎಲ್ ಪಡಿತರದಾರರಿಗೆ "ರಾಜೀವ್ ಆರೋಗ್ಯ ಭಾಗ್ಯ" ಹಾಗೂ ಸರ್ಕಾರಿ ನೌಕರರಿಗೆ "ಜ್ಯೋತಿ ಸಂಜೀವಿನಿ" ಯೋಜನೆಗಳ ಚಾಲನಾ ಸಮಾರಂಭ<br><br>ನೂತನ ಯೋಜನೆಗಳ ಚಾಲನೆ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ<br><br>ನೂತನ ಯೋಜನೆಯ ಮೊಬೈಲ್ ಅಪ್ಲಿಕೇಷನ್ ಬಿಡುಗಡೆ:<br>ಶ್ರೀ ಯು.ಟಿ.ಖಾದರ್<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 20-01-2015<br>ಮಂಗಳವಾರ<br>ಸಂಜೆ<br>4.00 ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧ,<br>ಬೆಂಗಳೂರು – 560 001 |

| | | | |
|---|---|---|---|
| | **ಕೈಪಿಡಿ ಬಿಡುಗಡೆ:**<br>**ಡಾ॥ ಶರಣ ಪ್ರಕಾಶ್ ಆರ್.ಪಾಟೀಲ್**<br>ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು<br><br>ಅಧ್ಯಕ್ಷತೆ:<br>**ಶ್ರೀ ಆರ್.ರೋಷನ್ ಬೇಗ್**<br>ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು | | |

ನಿರ್ದೇಶಕರ ಪರವಾಗಿ

## ಮಾಧ್ಯಮದವರ ಗಮನಕ್ಕೆ

**ಜನವರಿ 26 ರ ಗಣರಾಜ್ಯೋತ್ಸವದ ಅಂಗವಾಗಿ ರಾಜ್ಯಪಾಲರು ರಾಜಭವನದಲ್ಲಿ ಸಂಜೆ 5.00 ಗಂಟೆಗೆ ಏರ್ಪಡಿಸಿರುವ ಚಹಾ ಕೂಟದ ವರದಿಗಾಗಿ ಆಗಮಿಸುವ ಮಾನ್ಯತೆ ಪಡೆದ ಮಾಧ್ಯಮ ಪ್ರತಿನಿಧಿಗಳು ಜನವರಿ 20 ರಿಂದ ಜನವರಿ 24 ರವರೆಗೆ ಕಛೇರಿ ವೇಳೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ಆಹ್ವಾನ ಪತ್ರಿಕೆಯನ್ನು ಪಡೆದುಕೊಳ್ಳ ಬಹುದಾಗಿದೆ.**

## ಮಾಧ್ಯಮದವರ ಗಮನಕ್ಕೆ

ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪೆರೇಡ್ ಮೈದಾನದಲ್ಲಿ ದಿನಾಂಕ: 26-1-2015 ರಂದು ನಡೆಯುವ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯಮಟ್ಟದ, ರಾಷ್ಟ್ರಮಟ್ಟದ ದಿನಪತ್ರಿಕೆಗಳು ಹಾಗೂ ಸುದ್ದಿ ವಾಹಿನಿಗಳ ಮಾನ್ಯತೆ ಪಡೆದ ಪ್ರತಿನಿಧಿಗಳನ್ನು ಅಹ್ವಾನಿಸಲಾಗಿದೆ.

ಈ ಕಾರ್ಯಕ್ರಮದ ಮಾಧ್ಯಮ ಪ್ರವೇಶ ಪತ್ರಗಳನ್ನು ಉಪನಿರ್ದೇಶಕರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಸಂಖ್ಯೆ: 17, ವಾರ್ತಾಸೌಧ, ಎರಡನೇ ಮಹಡಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, 2ನೇ ಮಹಡಿ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು ಇಲ್ಲಿ ದಿನಾಂಕ: 20-1-2015 ರಿಂದ 24-1-2015 ರವರೆಗೆ ಕಛೇರಿ ವೇಳೆಯಲ್ಲಿ ವಿತರಿಸಲಾಗುವುದು.

ಪತ್ರಿಕಾ ಪಾಸು ಒಂದರಲ್ಲಿ ಇಬ್ಬರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ. ರಾಷ್ಟ್ರಮಟ್ಟದ, ರಾಜ್ಯಮಟ್ಟದ ದಿನ ಪತ್ರಿಕೆಗಳ ವರದಿಗಾರರು ಮತ್ತು ಛಾಯಾಗ್ರಾಹಕರಿಗೆ ತಲಾ ಒಂದು ಹಾಗೂ ಸುದ್ದಿವಾಹಿನಿಗಳ ಪ್ರತಿನಿಧಿಗಳು, ಕ್ಯಾಮರಾಮನ್‌ಗಳಿಗೆ ತಲಾ ಎರಡು ಪತ್ರಿಕಾ ಪಾಸುಗಳನ್ನು ನೀಡಲಾಗುವುದು. ಈ ಕಾರ್ಯಕ್ರಮದ ವರದಿಗಾಗಿ ನಿಯೋಜಿಸುವ ವರದಿಗಾರರು, ಪತ್ರಿಕಾ ಛಾಯಾಗ್ರಾಹಕರು/ ಕ್ಯಾಮರಾಮನ್‌ಗಳ ವಿವರಗಳನ್ನೊಳಗೊಂಡ ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಶಿಫಾರಸು ಪತ್ರ ನೀಡಿ, ಪ್ರವೇಶ ಪತ್ರ ಪಡೆದುಕೊಳ್ಳಲು ಕೋರಿದೆ.

# ಪತ್ರಿಕಾ ಪ್ರಕಟಣೆ

## ಸಚಿವ ಸಂಪುಟ ಸಭೆ

**ಬೆಂಗಳೂರು, ಜನವರಿ 19 (ಕರ್ನಾಟಕ ವಾರ್ತೆ)**

**ರಾಜ್ಯ ಸಚಿವ ಸಂಪುಟದ ಸಭೆಯು ಜನವರಿ 21 ರಂದು ಮಧ್ಯಾಹ್ನ 3.30 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಂಗಣದಲ್ಲಿ ನಡೆಯಲಿದೆ.**

## ಮೊಬೈಲ್ ಅಪ್ಲಿಕೇಷನ್ ಮೂಲಕ ಆಡಳಿತ [E- Governance through Mobile Apps]

**ಬೆಂಗಳೂರು, ಜನವರಿ 19 (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರವು ರಾಜ್ಯದ ಮುಖ್ಯ ರಸ್ತೆ ಸಂಪರ್ಕ ಜಾಲದ 10500 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿ/ ಸುಧಾರಣೆ ಮಾಡುವ ಸಲುವಾಗಿ ಯೋಜನೆಯನ್ನು ಅನುಮೋದಿಸಿದ್ದು, ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ಲಭ್ಯವಿರುವ ಉಪಕರಣವನ್ನು (Available machinery) ಉಪಯೋಗಿಸಿಕೊಂಡು, ಕೈಗೊಳ್ಳುವ ಬಗ್ಗೆ ಯೋಜಿಸಿ 2 ವರ್ಷಗಳಲ್ಲಿ ಪೂರ್ಣಗೊಳಿಸುವ ಬಗ್ಗೆ ಕಾರ್ಯ ರೂಪಿಸಿರುತ್ತದೆ. ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಯೋಜನಾ ರೂಪದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಮೊದಲನೇ ಹಂತದಲ್ಲಿ 3724.41 ಕಿ.ಮೀಗಳನ್ನು ಮತ್ತು ಎರಡನೇ ಹಂತದಲ್ಲಿ 3745 ಕಿ.ಮೀಗಳನ್ನು ಅಭಿವೃದ್ಧಿಗೊಳಿಸಲು ಅನುಮೋದನೆಯಾಗಿದೆ. ಮೊದಲನೇ ಹಂತದ 66 ಪ್ಯಾಕೇಜ್‌ಗಳಲ್ಲಿ 56 ಪ್ಯಾಕೇಜ್‌ನ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 10 ಪ್ಯಾಕೇಜ್‌ನ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 2012-13 ನೇ ಸಾಲಿನಲ್ಲಿ 1438 ಕಿ.ಮೀ ಉದ್ದದ (ಸುಧಾರಣೆ- 828 ಕಿ.ಮೀ ಹಾಗೂ ನವೀಕರಣದ-610 ಕಿ.ಮೀ) ರಸ್ತೆಯನ್ನು ರೂ. 519.56 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. 2013-14 ನೇ ಸಾಲಿನಲ್ಲಿ 1391 ಕಿ.ಮೀ ಉದ್ದದ (ಸುಧಾರಣೆ- 913 ಕಿ.ಮೀ ಹಾಗೂ ನವೀಕರಣದ-477 ಕಿ.ಮೀ) ರಸ್ತೆಯನ್ನು ರೂ. 770.58 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. 2014-15 ನೇ ಸಾಲಿನಲ್ಲಿ 24 ರ ಅಕ್ಟೋಬರ್ 2014ರ ಅಂತ್ಯಕ್ಕೆ 388.56 ಕಿ.ಮೀ ಉದ್ದದ (ಸುಧಾರಣೆ- 128.56 ಕಿ.ಮೀ ಹಾಗೂ ನವೀಕರಣದ-260 ಕಿ.ಮೀ) ರಸ್ತೆಯನ್ನು ರೂ. 114.61 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. ಒಟ್ಟಾರೆಯಾಗಿ 3200 ಕಿ.ಮೀ ಉದ್ದದ (ಸುಧಾರಣೆ- 2040 ಕಿ.ಮೀ ಹಾಗೂ ನವೀಕರಣದ-1160 ಕಿ.ಮೀ) ರಸ್ತೆಯನ್ನು ರೂ. 1404.75 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. ಎರಡನೇ ಹಂತದ 70 ಪ್ಯಾಕೇಜ್‌ಗಳಲ್ಲಿ 10 ಪ್ಯಾಕೇಜ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಇಲ್ಲಿಯವರೆಗೆ 1800 ಕಿ.ಮೀ ರಸ್ತೆಯ ಉದ್ದವನ್ನು ಅಭಿವೃದ್ಧಿ ಪಡಿಸಲಾಗಿದೆ. ಒಟ್ಟಾರೆಯಾಗಿ 5000 ಕಿ.ಮೀ ಗಳನ್ನು ಇಲ್ಲಿಯವರೆಗೆ ಅಭಿವೃದ್ಧಿಗೊಳಿಸಲಾಗಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯನ್ನು ಸಮರ್ಪಕವಾಗಿ ನಿಯೋಜಿತ ಸಮಯದೊಳಗೆ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಕಾರ್ಯಗತಗೊಳಿಸಲು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (PMS)ನ್ನು ಅಳವಡಿಸಲಾಗಿದೆ. ಆಧುನಿಕ ಮಾಹಿತಿ ತಂತ್ರಜ್ಞಾನದ ಮೂಲಕ ರಸ್ತೆಯ ನಿರ್ಮಾಣ, ಉಸ್ತುವಾರಿ, ಗುಣ ನಿಯಂತ್ರಣದ ಪರೀಕ್ಷೆಗಳು, ದಿನ ನಿತ್ಯದ ಚಟುವಟಿಕೆಗಳು, ಛಾಯಚಿತ್ರಗಳನ್ನು ಕಾಮಗಾರಿ ನಡೆಯುವ ಸ್ಥಳದಿಂದ ಮೊಬೈಲ್ ಅಪ್ಲಿಕೇಷನ್ ಮೂಲಕ ಅಪ್‌ಲೋಡ್ ಮಾಡಿ ಮೇಲ್ವಿಚಾರಣೆ ಮಾಡಬಹುದಾಗಿದೆ. ಈ ತಂತ್ರಜ್ಞಾನವು ಎಲ್ಲಾ Android Mobile ಗಳಲ್ಲಿ Google Play ಮೂಲಕ ಡೌನ್‌ಲೋಡ್ ಮಾಡಿಕೊಂಡು ವೀಕ್ಷಿಸಬಹುದು. ರಾಜ್ಯ ಯಾವುದೇ ಮೂಲೆಯಿಂದ ಮಾಹಿತಿಯನ್ನು ತಕ್ಷಣ ಪಡೆದು ಕಾಮಗಾರಿಯನ್ನು ನಿಯಂತ್ರಿಸಬಹುದು. ರಸ್ತೆಯ ನಕ್ಷೆ ಮತ್ತು ತಾಂತ್ರಿಕ ವಿಶ್ಲೇಷಣೆಯನ್ನು Mobile Apps ಮೂಲಕ ಮಾಡಬಹುದಾಗಿದೆ. ರಸ್ತೆ ನಿರ್ಮಾಣದಲ್ಲಿ ಇದು ಒಂದು ಕ್ರಾಂತಿಕಾರಿ ಬೆಳವಣಿಗೆಯಾಗಿದ್ದು ಇಲ್ಲಿಯವರೆಗೆ ಸುಮಾರು 5000 ಕಿ.ಮೀ ಗಳನ್ನು ಯಶಸ್ವಿಯಾಗಿ ಕೇವಲ ಎರಡು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಮಾಡಲಾಗಿದೆ.

ಕೇಂದ್ರ ಸರ್ಕಾರವೂ ನೂತನ ತಂತ್ರಜ್ಞಾನ ಬಳಸಿ ಕಾರ್ಯನಿರ್ವಹಿಸುತ್ತಿರುವ ಯೋಜನೆಗಳನ್ನು ವಿಶ್ಲೇಷಣೆ ಮಾಡಿ ರಾಷ್ಟ್ರ ಪ್ರಶಸ್ತಿ ನೀಡಲು ದಿನಾಂಕ:21–07–2014 ರಂದು ಆಹ್ವಾನ ನೀಡಿತ್ತು. ರಾಷ್ಟ್ರದ ಎಲ್ಲಾ ಮೂಲೆಗಳಿಂದ ವಿಧ ವಿಧವಾದ ತಂತ್ರಜ್ಞಾನ ಬಳಸಿ ನಿರ್ವಹಿಸುತ್ತಿರುವ ಯೋಜನೆಗಳ ಬಗ್ಗೆ ನವದೆಹಲಿಯಲ್ಲಿ ಆಡಳಿತ ಮತ್ತು ಸುಧಾರಣೆ ಇಲಾಖೆ, ಮಾಹಿತಿ ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರದವರು Power Point Presentation ನೀಡಲು ಆಹ್ವಾನ ನೀಡಿತ್ತು. ದಿನಾಂಕ:22-12-2014 ರಂದು ಲೋಕೋಪಯೋಗಿ ಇಲಾಖೆಯಡಿಯಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ರಸ್ತೆಗಳ ಉಸ್ತುವಾರಿಯನ್ನು ಮಾಡಲು ಬಳಸುತ್ತಿರುವ E- Governance through Mobile Apps ಬಗ್ಗೆ ನವದೆಹಲಿಯಲ್ಲಿ Presentation ನೀಡಲಾಯ್ತು. ಈ ಮೊಬೈಲ್ ಆಪ್ಸ್ ಮೂಲಕ ಕಾಮಗಾರಿಯ ಉಸ್ತುವಾರಿ ಮತ್ತು ನಿರ್ವಹಣೆಯ ಯೋಜನೆಯನ್ನು ಭಾರತ ಸರ್ಕಾರದ ಆಡಳಿತ ಮತ್ತು ಸುಧಾರಣೆ ಇಲಾಖೆ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ರವರು ದೇಶದ ಅತ್ಯುತ್ತಮವಾದ ತಂತ್ರಜ್ಞಾನ ಉಪಯೋಗಿಸಿಕೊಳ್ಳುತ್ತಿರುವ ಯೋಜನೆ ಎಂದು ಪರಿಗಣಿಸಿ ಮೊದಲನೇ ಬಹುಮಾನವನ್ನು ನೀಡಿದೆ. ದಿನಾಂಕ: 30–01–2015 ರಂದು ಗಾಂಧಿನಗರ, ಗುಜರಾತ್ ರಾಜ್ಯದಲ್ಲಿ ಪ್ರಶಸ್ತಿ ಸಮಾರಂಭವನ್ನು ಚಿನ್ನದ ಪದಕ ನೀಡಿ ಸನ್ಮಾನ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ, ಗುಜರಾತ್ ಸರ್ಕಾರ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ ಸಮಯೋಜನೆಯೊಂದಿಗೆ ಹಮ್ಮಿಕೊಂಡಿದೆ. ರಾಜ್ಯಕ್ಕೆ ರಸ್ತೆಗಳ ಉಸ್ತುವಾರಿ ಮತ್ತು ಮೇಲ್ವಚಾರಣೆಗಾಗಿ ರೂಪಿಸಿರುವ ಈ ತಂತ್ರಜ್ಞಾನಕ್ಕೆ ದೊರಕಿರುವ ಪ್ರಶಸ್ತಿಯು ರಾಜ್ಯ ರಸ್ತೆ ಅಭಿವೃದ್ಧಿ ಯೋಜನೆಯ ಆಂದೋಲನವಾಗಿದೆ. ಈ ಪ್ರಶಸ್ತಿಯಿಂದ ಉತ್ತೇಜನಕಾರಿಯಾಗಿ ಉತ್ತಮ ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರೈಸಲು ಅನುಕೂಲವಾಗುತ್ತಿದೆ.